**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 72/2025**

**ಚಾ.ಸಾಃ 3, ಫ್ರಾ.ಸಾಃ 2**

| | |
|---|---|
| ಸಾಕ್ಷಿದಾರನ ಹೆಸರು | ನಾಗರಾಜ ನಾಯ್ಕ |
| ತಂದೆಯ ಹೆಸರು | ಮಹಾಬಲೇಶ್ವರ ನಾಯ್ಕ |
| ವಯಸ್ಸು | 32 ವರ್ಷಗಳು |
| ಉದ್ಯೋಗ | ಅಡಿಗೆ ಕೆಲಸ |
| ವಾಸ್ತವ್ಯ | ಅಡಕಾರ್, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಆರೋಪಿ ಮುಖಪರಿಚಯ.

ಈಗ್ಗೆ 3-4 ತಿಂಗಳ ಹಿಂದೆ ನಾನು ಮತ್ತು ಚಾಸಾ-2 ಬೈಕಿನಲ್ಲಿ ಮೂಡ್ಕಣಿಯಿಂದ ಹೊನ್ನಾವರಕ್ಕೆ ಬರುತ್ತಿರಬೇಕಾದರೆ ಕವಲಗೆರೆ ಹತ್ತಿರ ಗೊತ್ತಿರುವ ಪೋಲೀಸರು ನಮ್ಮನ್ನು ತಡೆದು ನಿಲ್ಲಿಸಿ ಒಂದು ಪಂಚನಾಮೆಗೆ ಸಹಿ ಹಾಕುವಂತೆ ಕರೆದರು. ಬಸ್ ಸ್ಟಾಂಡ್ ಪಕ್ಕದಲ್ಲಿ ನಿಲ್ಲಿಸಿ 2 ರಟ್ಟಿನ ಬಾಕ್ಸನಲ್ಲಿ ಸಾರಾಯಿ ಇದ್ದು ಅಲ್ಲಿ ಫೋಟೋ ತೆಗೆಸಿ ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಫೋಟೋ ತೆಗೆದಿದ್ದು ಈಗ ಅದನ್ನು ನೋಡುತ್ತಿದ್ದು ನಿಪಿ-2 ಎಂದು ಗುರುತಿಸಲಾಗಿದೆ. ಈಗ ನ್ಯಾಯಾಲಯದ ಮುಂದೆ ಇರುವ ರಟ್ಟಿನ ಪೆಟ್ಟಿಗೆ ಇರುವ ಬಿಳಿಯ ಬಟ್ಟೆಯ ಚೀಲದ ಮೇಲೆ ಇರುವ ಸಹಿಯನ್ನು ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ಬ್ಯಾಕ್ಸನ್ನು ಮುಮಾ-1 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ಮುಮಾ-1(ಬಿ) ಎಂದು ಗುರುತಿಸಲಾಯಿತು. ಮುಮಾ-1 ರೊಳಗಿರುವ ರಟ್ಟಿನ ಬಾಕ್ಸ ಮತ್ತು ಬಾಟಲಿಗಳನ್ನು ಗುರುತಿಸಿ ಇದೇ ಬಾಟಲಿಗಳ ಮುಂದೆ ನಿಪಿ-2 ರ ಫೋಟೋ ತೆಗೆದಿರುವುದಾಗಿ ನುಡಿದಿರುತ್ತಾರೆ. ನಿಪಿ-1 ರಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ. ಯಾವ ಕಾರಣಕ್ಕೆ ಸಹಿ ಹಾಕಿಸಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ದಿನಾಂಕ 28-07-2025 ರಂದು ಸಂಜೆ 06-00 ರ ಸಮಯಕ್ಕೆ ಪೋಲಿಸರು ನನ್ನನ್ನು ಮತ್ತು ಚಾಸಾ-2 ರವರನ್ನು ದಿಬ್ಬಣಗಲ್ ಬಸಸ್ಟಾಂಡ್ ಹತ್ತಿರ ಕರೆಸಿ ರಾಷ್ಟ್ರೀಯ ಹೆದ್ದಾರಿಯ ಪಕ್ಕದ

ಅಂಗಡಿಯಲ್ಲಿ ಅಕ್ರಮ ಮಧ್ಯ ಮಾರಾಟ ಮಾಡುತ್ತಿದದ ಬಗ್ಗೆ ಮಾಹಿತಿ ತಿಳಿಸಿ ಪಂಚರಾಗಿ ಬರಬೇಕೆಂದು ಕರೆದಿದ್ದು ಅದಕ್ಕೆ ಒಪ್ಪಿ ನಾವು ಹೋದಾಗ ಹೆದ್ದಾರಿಯ ಪಕ್ಕದ ಒಂದು ಅಂಗಡಿಯಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಕೈಯ್ಯಲ್ಲಿ ಒಂದು ಚೀಲ ಹಿಡಿದುಕೊಂಡು ನೆಲದಲ್ಲಿ ಒಂದು ಚೀಲವನ್ನು ಇಟ್ಟು ಮಧ್ಯ ಮಾರಾಟ ಮಾಡುತ್ತಿದ್ದು ಅದನ್ನು ನೋಡಿ ನಮ್ಮ ಸಮಕ್ಷಮ ಪೋಲೀಸರು ದಾಳಿ ಮಾಡಿದಾಗ ನ್ಯಾಯಾಲಯದ ಮುಂದಿರುವ ಆರೋಪಿ ಓಡಿ ಹೋಗಿದ್ದು ಆತ ಹಿಡಿದುಕೊಂಡಿದ್ದ ಚೀಲವನ್ನು ಪರಿಶೀಲಿಸಿದಾಗ ಒಂದು ರಟ್ಟಿನ ಬಾಕ್ಸನಲ್ಲಿ 650 ಮಿಲಿಯ 7 ಬಿಯರ್ ಬಾಟಲಿಗಳು, ಇನ್ನೊಂದು ರಟ್ಟಿನ ಬಾಕ್ಸನಲ್ಲಿ 9 ಬಿಯರ ಬಾಟಲಿಗಳು, ಕೆಂಪು ಬಣ್ಣದ ಚೀಲದಲ್ಲಿ 180 ಎಂಎಲ್‌ನ 12 ಟೆಟ್ರಾ ಪ್ಯಾಕಗಳು ಇದ್ದು ಪೋಲೀಸರು ಅವುಗಳನ್ನು ಅಮಾನತ್ತುಪಡಿಸಿಕೊಂಡು ಬಿಳಿಯ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿ ನಮ್ಮ ಸಮಕ್ಷಮ ವಿವರವಾದ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1ರ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ</u>**

ನಾನು ಪಂಚನಾಮೆಯನ್ನು ಓದಿ ನೋಡಿ ಸಹಿ ಮಾಡಿಲ್ಲ. ಪೋಲೀಸರು ಹೇಳಿದ್ದರಿಂದ ಸಹಿ ಮಾಡಿದ್ದೇನೆ. ಮುಮಾ-1ರ ರಟ್ಟಿನ ಪೆಟ್ಟಿಗೆಯಲ್ಲಿ ಯಾವ ನಮೂನೆಯ ಬಾಟಲಿಗಳು ಇದ್ದವು ಅಂತ ನನಗೆ ಗೊತ್ತಿಲ್ಲ. ದಿಬ್ಬಣಗಲ್ ಬಸಸ್ಟಾಂಡ್ ನಿಂದ ಕವಲಗೇರಿ ಬಸಸ್ಟಾಂಡ್ ಸುಮಾರು ಮೂಕ್ಕಾಲು ಕಿಲೋಮೀಟರ್ ದೂರ. ನಾನು ಕವಲಗೇರಿ ಬಸಸ್ಟಾಂಡನಲ್ಲಿ ಪಂಚನಾಮೆಗೆ ಸಹಿ ಹಾಕಿದ್ದೇನೆ. ನಾನು ಸಹಿ ಹಾಕುವ ಕಾಲಕ್ಕೆ ಸ್ಥಳದ ಹತ್ತಿರದಲ್ಲಿ ಆರೋಪಿಯನ್ನು ನಾನು ನೋಡಲಿಲ್ಲ.

**<u>ಮರುವಿಚಾರಣೆಃ ಇರುವುದಿಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**